(iii) *re* : Action Taken under the Judical Enquiry Commission into death of Sri Y. Thimmappa in the Sandur Murder Case

ಶ್ರೀ ಎಚ್ ಡಿ. ದೇವೇಗೌಡ (ಹೊಳೆನರಸೀಪುರ).—312ರ ಕೆಳಗೆ ನಿನ್ನೆ ಇನ್ನೊಂದು ನೋಟೀಸನ್ನು ನಾನು ಕಳ ಹಿಸಿದ್ದೆ. ಎಲಗಾರ್ ತಿಮ್ಮಪ್ಪನವರ ಮೇರೆ ನಡೆದಂಥ ಒಂದು ಘಟನೆ ಪ್ರಕರಣದಲ್ಲಿ ಏನು ನ್ಯಾಯಾಂಗ ವಿಚಾರಣೆಯಾಗಿ ತೀರ್ಪನ್ನು ಕೊಟ್ಟಿದ್ದಾರೆ, ಅದನ್ನು ಕಾರ್ಯ ರೂಪಕ್ಕೆ ತರತಕ್ಕದ್ದು ಅದರಲ್ಲಿ ಇರತಕ್ಕ ಪ್ರಶ್ನೆ ಇದರ ಬಗ್ಗೆ ಚರ್ಚೆ ಹೆಚ್ಚಬೇಕಾಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಹೇಳಿದ್ದಾರೆ. ಸರಕಾರಕ್ಕೆ ವರದಿಯನ್ನು ಕೊಟ್ಟರತಕ್ಕದ್ದು 7-6-1974 ರಂದು. ಇದರ ಮೇಲೆ ಸರಕಾರದವರು, ಒಬ್ಬ ಎಸ್.ಪಿ.ಯನ್ನು ಎನ್‌ಕ್ವಾಯರಿ ಆಫೀಸರನ್ನಾಗಿ ನೇಮಕಮಾಡಿದಾರೆ. ಎನ್‌ಕ್ವಾಯರಿ ಆಫೀಸರನ್ನಾಗಿ ನೇಮಕಮಾಡಿದ್ದು 6-7-1974ರಲ್ಲಿ ಮೂರನೇ ದಿವಸ ವಿಚಾರಣೆಮಾಡಲು ಅಂದರೆ, 12ರಂದು ಡಿಪಾರ್ಟ್‌ಮೆಂಟರ್ ಎನ್‌ಕ್ವಾಯರಿ ಮಾಡಲು ಐ.ಜಿ.ಪಿ. ಒಬ್ಬ ಎಸ್.ಪಿ.ಯವರನ್ನು ನೇಮಕಮಾಡಿದರು. ಅವರನ್ನು ನೇಮಕಮಾಡಿದ್ದು 28-8-1974ರಲ್ಲಿ. ಅವರು ಈಗ ಚಾರ್ಜಸ್ ಫ್ರೇಂ ಮಾಡಿದ್ದಾರೆ. ಚಾರ್ಜಸ್ ಫ್ರೇಂಮಾಡಿದ್ದು 26-11-1974ರಂದು. ಆದಕ್ಕೆ, ಚಾರ್ಜಸ್‌ಗೆ ಉತ್ತರಕೊಡಲು ಸರ್ಕಾರ್ ಇನ್‌ಸ್ಪೆಕ್ಟರ್ ಅವರು 15 ದಿವಸ ಟೈಂ ತೆಗೆದುಕೊಂಡಿದ್ದಾರೆ. ಆದರಿಂದೀಚೆಗೆ ಇದರ ಬಗ್ಗೆ ಏನೂ ಇಲ್ಲ. ನಾವು, ಈ ನಾಲ್ಕು ದಿನಗಳಿಂದ ಈ ಸಭೆಯ ಕಾರ್ಯಕಲಾಪಗಳನ್ನು ಹಡಹಿಡಿಯ ತಕ್ಕ ಅವಕಾಶವನ್ನೆಗೆ ಗುರಿಯಾಗಿದ್ದೇವೆ. ಮಂಗಳೂರು ಪ್ರಕರಣದಲ್ಲಿ ಜುಡಿಷಿಯಲ್ ಪ್ರೋಬ್ ಆಗಬೇಕು ಎಂದು. ಇವತ್ತಿನ ದಿವಸ ನ್ಯಾಯಾಂಗ ವಿಚಾರಣೆಯಾಗಿ ಅವರು ಒಂದು ವರ್ಡಿಕ್ಟ್ ಕೊಟ್ಟಮೇಲೆ, ಆ ವರ್ಡಿಕ್ಟ್‌ಗೆ ಸರಕಾರ ಎಷ್ಟುಮಟ್ಟಿಗೆ ಮಾನ್ಯತೆ ಕೊಟ್ಟಿದೆ ಎನ್ನುವುದೇ ಈಗಿನ ಪ್ರಶ್ನೆ. 7ನೇ ತಾರೀಖಿನಲ್ಲಿ ಸರಕಾರಕ್ಕೆ ವರದಿ ಬಂದಮೇರೆ ತೆಗೆದುಕೊಂಡಿರತಕ್ಕ ಕ್ರಮ ಏನು? ಅದೇ ಘಟನೆಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ಶ್ರೀಮಾನ್ ಕೃಷ್ಣಾ ಅವರು, ನೀವು ಪ್ರತಿಯೊಬ್ಬರ ಮೇಲೂ ಅಪಾದನೆ ಮಾಡಲಿಕ್ಕೆ ಹೋಗಬೇಡಿ ಎಂದು ವಿವೇಕ ಹೇಳಿದ್ದಾರೆ. ಇವತ್ತು ನಾನು ಕೇಳುತ್ತೇನೆ, ಈಗ ಸರಕಾರಕ್ಕೆ ಇರತಕ್ಕ ಅಡ್ಡಿ ಏನು? ವರದಿ ಕೊಟ್ಟ ಮೂರನೇ ದಿವಸ ಅವರನ್ನು ಮಂಗಳೂರಿನಿಂದ ವರ್ಗಮಾಡಲಾಯಿತು. ಇದು ಒಂದು ಭಾಗ. ಇವತ್ತು ಅವರು 15 ದಿವಸ ಸಮಜಾಯಿಷಿ ಕೊಡಲಿಕ್ಕೆ ಅವಕಾಶ ಕೇಳಿದ್ದರು, 26-11-1974ರಲ್ಲಿ ಜುಡಿಷಿಯರ್ ಫೈಂಡಿಂಗ್ಸ್ ಹೊಂಗೆ ಬಂದ ದಿವಸ, ಪ್ರಾಮಾಣಿಕವಾಗಿ ನಾವು ಇದರ ಬಗ್ಗೆ ವಿಚಾರಣೆ ನಡೆಸುತ್ತೇವೆ ಎಂದು ಇದ್ದರೆ, ಅವರನ್ನು ಸಸ್ಪೆಂಡ್ ಮಾಡಬೇಕಾಗಿತ್ತು. ಆದರೆ, ಇವತ್ತಿನವರೆಗೂ ಮಾಡಿಲ್ಲ. ಷೋಕಾಸ್ ನೋಟೀಸ್ ಕೊಟ್ಟಿದ್ದೀರಿ. ಇವರಿಗೆ ಸರಕಾರ ಪರೋಕ್ಷವಾದಂಥ ಒಂದು ಆಶೀರ್ವಾದ ಕೊಟ್ಟಿದ್ದಾರೆ ಎನ್ನುವ ತಕ್ಕಂಥದ ಕ್ಕೆ ಮತ್ತು ಎಷ್ಟು ತೀವ್ರತೆಯಲ್ಲಿ ಒಬ್ಬ ಜುಡಿಷಿಯರ್ ಅಥಾರಿಟಿಯವರು ಕೊಟ್ಟಂಥ ವರದಿ ಮೇಲೆ ಕ್ರಮ ತೆಗೆದುಕೊಂಡಿದಾರೆ ಎನ್ನುತಕ್ಕಂಥದಕ್ಕೆ ಇದು ಒಂದು ಸಾಕ್ಷಿ. ಅವತ್ತು ನಾವು ಹೋರಾಟ ಮಾಡಿದೆವು. ಜುಡಿಷಿಯರ್ ಪ್ರೋಬ್, ಟರ್ಮ್ಸ್ ಆಫ್ ರೆಫರೆನ್ಸ್ ಬಗ್ಗೆ ಕೃಷ್ಣಾ ಅವರಿಗೂ ನನಗೂ ಸಾಕಷ್ಟು ಚರ್ಚೆಯಾಯಿತು. ಮಾನ್ಯ ಕೃಷ್ಣಾ ಅವರು ರಾ.ಪರೀಕ್ಷೆ ಓದಿದ್ದಾರೆ. ನಾನು ಓದಿಲ್ಲ. ಪದಪದಕ್ಕೂ ಬಿಡಿಸಿ ಬಿಡಿಸಿ ಲೆಕ್ಕಾಚಾರ ಹಾಕಿ, ಪೋಲೀಸರ ಇತಿಮಿತಿಯೊಳಗೇ ಅನ್ವಯಿಸಿದರು. ಸಂಬಂಧಪಟ್ಟ ಅಧಿಕಾರಿಗಳ ಮೇರೆ ತ್ವರಿತವಾಗಿ ಕ್ರಮ ತೆಗೆದುಕೊಳ್ಳದೇ ಇರುವುದಕ್ಕೆ ಸರಕಾರದವರಿಗೆ ಇರತಕ್ಕ ಪ್ರಬಲವಾದ ಕಾರಣ ಏನು ಎನ್ನುವುದನ್ನು ಇವತ್ತಿನ ದಿವಸ ದೇಶದ ಜನತೆ ತಿಳಿದುಕೊಳ್ಳಬೇಕಾಗಿದೆ ಎನ್ನುವ ಮಾತ್ರವನ್ನು ತಿಳಿಸುತ್ತೇನೆ. ಮಾನ್ಯ ಚನ್ನಬಸಪ್ಪನವರು ಯಾವ ರೀತಿ ಉತ್ತರ ಕೊಟ್ಟು ನಮ್ಮನ್ನು ಸಮಾಧಾನ ಮಾಡುತ್ತಾರೆ ಎನ್ನುವುದು ಗೊತ್ತಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಮಾಧಾನವಾಗಿ ಇನ್ನೂ ಹೆಚ್ಚಿನ ಸಮಾಧಾನವಾಗುವ ಹಾಗೆ ಉತ್ತರ ಕೊಡುತ್ತೇನೆ. ನಿಜವಾಗಿ ಮಲಗಿದ್ದವರನ್ನು ಸುಲಭವಾಗಿ ಏಳಿಸಬಹುದು. ಸುಮ್ಮನೆ ಮಲಗಿದ್ದವರನ್ನು ಏಳಿಸುವುದಕ್ಕಾಗುವುದಿಲ್ಲ. ಜುಡಿಷಿಯರ್ ಆಫೀಸರ್‌ರವರು ಒಂದು ತೀರ್ಮಾನ ಕೊಟ್ಟಿದ್ದಾರೆ. ಅವರು ಹಿಂಸೆಯನ್ನು ಮಾಡಿದ್ದಾರೆ ಎನ್ನುತಕ್ಕ ಅಂಶ ಹೇಳಿದ್ದಾರೆ. ಅದರ ಮೇಲೆ ಕ್ರಮ ಸರ್ಕಾರ ತೆಗೆದುಕೊಳ್ಳಬೇಕಾದರೆ ಸಿ. ಸಿ. ಎ. ರೂಲ್ಸ್ ಪ್ರಕಾರ ಕಲವು ಪ್ರೊಸೀಜರ್‌ಗಳು ಇವೆ. ಆ ಪ್ರೊಸೀಜರ್ ಬಿಟ್ಟು ಅವರು ಹೇಳಿದ್ದರಮೇರೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಜುಡಿಷಿಯರ್ ಆಫೀಸರ್ ತೀರ್ಮಾನ ಕೊಡುವಾಗ ಇಂತಹ ಅಪರಾಧ ಮಾಡಿದ್ದಾರೆ ಎಂದು ಹೇಳುತ್ತಾರೆ, ಏನು ಭ್ರಷ್ಟಾಚಾರ ಆಗಿದೆ ಅದನ್ನು ಹೇಳುತ್ತಾರೆ. ಅದನ್ನು ಹೇಳಿದಮೇಲೆ ನಮ್ಮ ಸಿ.ಸಿ.ಎ. ರೂಲ್ಸ್ ಪ್ರಕಾರವಾಗಿ ಒಬ್ಬ ಸಮರ್ಥಾಧಿಕಾರಿಯನ್ನು ನೇಮಕ

ಮಾಡಿ ಅವರಿಗೆ ನೋಟೀಸ್ ಕೊಡಬೇಕು. ಏನೇನು ಕ್ರಮಗಳನ್ನು ಅನುಸರಿಸಬೇಕೋ ಅದನ್ನೆಲ್ಲಾ ಅನುಸರಿಸಿ ಅವರನ್ನು ಶಿಕ್ಷೆಮಾಡಬೇಕು, ಅದರಂತೆ ಈಗ ಕ್ರಮ ತೆಗೆದುಕೊಂಡು ನೋಟೀಸ್ ನಹ ಕೊಟ್ಟಾಗಿದೆ. ನೋಟೀಸ್ ಕೊಟ್ಟಮೇಲೆ ಅವರು ನಮಗೆ ಬರೆದರು, ನಾವು ರೆಕಾರ್ಡ್‌ನ್ನು ಪರೀಕ್ಷೆಮಾಡಬೇಕು ಎಂದು. ಆಗ ನಮ್ಮ ರೂಲ್ಸ್ ಪ್ರಕಾರವಾಗಿ ಅವರಿಗೆ ಅವಕಾಶಗಳನ್ನು ಏರ್ಪಾಡು ಮಾಡದೆ ಹೋದರೆ ಅವಕಾಶಕೊಟ್ಟಿಲ್ಲ ಎಂದು ನಾಳೆ ಹೈಕೋರ್ಟಿಗೆ ಹೋಗುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಅದು ಮುಗಿದು ಮೂರು ತಿಂಗಳಾಯಿತು.

Sri H. M. CHANNABASAPPA.—We have very great respect for the hon. the Leader of the Opposition. I have often said ; "You are the people who build up our imag." ಈಗ ಅವರಿಗೆ ಮತ್ತೊಂದು ನೋಟೀಸ್ ಕೊಟ್ಟಿದ್ದೇವೆ. ನೀವು ಬರದೇ ಹೋದ ಪಕ್ಷದಲ್ಲಿ ಬರಲಿಲ್ಲ ಎಂದು ರೆಕಾರ್ಡ್ ಮಾಡಿ...

ಶ್ರೀ ಕಾಗೋಡು ತಿಮ್ಮಪ್ಪ.—ಕೊನೆ ತಾರೀಖು ಯಾವಾಗ ಕೊಟ್ಟಿದ್ದಾರೆ ?

Sri H. M. CHANNABASAPPA.—I am not one of those who would try to hide anything.

ಶ್ರೀ ಕೆ. ಪುಟ್ಟಸ್ವಾಮಿ.—ಮಂತ್ರಿಗಳು ಹೇಳುತ್ತಾರೆ ನೋಟೀಸ್ ಕೊಟ್ಟಿದ್ದೇವೆ ಎಂದು, ವಿರೋಧಪಕ್ಷದ ನಾಯಕರು ಕೇಳಿದ್ದಕ್ಕೆ ಶಿಕ್ಷೆಮಾಡುತ್ತೇವೆ ಎಂದು ಹೇಳಿದರು, ಮತ್ತೆ ನೋಟೀಸ್ ಏತಕ್ಕೆ ಕೊಟ್ಟಿದ್ದೀರಿ ?

Sri H. M. CHANNABASAPPA.—We are taking action ex-parte. ಏವರಿಗೆ ಕೊಟ್ಟರೆ ಬದಲಾವಣೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಜುಡಿಷಿಯರ್ ಆಫೀಸರ್ ಒಂದು ತೀರ್ಪನ್ನು ಕೊಟ್ಟಮೇಲೆ, ಕ್ರಮವನ್ನು ಅನುಸರಿಸಿ ಮಾಡಬೇಕಾಗುತ್ತದೆ. ಜಡ್ಜ್‌ಸ್ ಈಗಾಗಲೇ ತಪ್ಪುಮಾಡಿದ್ದಾರೆ ಎಂದು ವರದಿ ಕೊಟ್ಟುಬಿಟ್ಟಿದ್ದಾರೆ. ಆದುದರಿಂದ ನಾನು ಧೈರ್ಯವಾಗಿ ಹೇಳುತ್ತೇನೆ.

ಶ್ರೀ ಅಜೀಜ್‌ಸೇಠ್.—ಶಿಕ್ಷೆ ಮಾಡುತ್ತೇವೆಂದು ಹೇಳಿದರೆ ಏನು ಜಸ್ಟಿಸ್ ಸಿಕ್ಕುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಶಿಕ್ಷೆಮಾಡಬೇಕಾದರೆ ಯಾವ ಪ್ರಮಾಣದ ಮೇಲೆ ಶಿಕ್ಷೆ ಆಗಬೇಕು ಎನ್ನುತಕ್ಕಂಥಾದ್ದು ತೀರ್ಮಾನವಾಗಬೇಕು. We are taking action ex-parte. Final memo was issued on 17-2-1975 to the Circle Inspector to inspect the records, failing which we will proceed on the assumption that he has no explanation to offer.

Sri KAGODU THIMMAPPA.—What is the last date for filing the explanation ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಅವರನ್ನು ಸಸ್ಪೆಂಡ್ ಮಾಡುವುದಕ್ಕೆ ಕೆಲವು ನಿಯಮಗಳು ಇವೆ, ಆ ನಿಯಮಗಳನ್ನು ಅನುಸರಿಸಿ ಸಸ್‌ಪೆನ್‌ಷನ್ ಆರ್ಡರ್ ಮಾಡಬೇಕಾಗುತ್ತದೆ. ಒಬ್ಬ ವ್ಯಕ್ತಿ ಅಧಿಕಾರದಲ್ಲಿ ಇರುವುದರಿಂದ, ಅಧಿಕಾರದ ದುರುಪಯೋಗಮಾಡಿ ತೀರ್ಮಾನಗಳನ್ನು ಏನಾದರೂ ಬದಲಾವಣೆ ಮಾಡುವುದಕ್ಕೆ ಅವಕಾಶ ಇದ್ದರೆ ಆಗ ಸಸ್ಪೆನ್‌ಷನ್ ಮಾಡಬೇಕು, in the term of his office if he is going to change the turn of events—ಆಗ ಸಸ್‌ಪೆನ್‌ಷನ್ ಮಾಡಬೇಕು. ಈಗ ತೀರ್ಮಾನ ಕೊಟ್ಟಿರುವುದರಿಂದ, ಕಾಗದ ಪತ್ರಗಳನ್ನು, ಯಾವುದನ್ನೇ ಆಗಲಿ ಬದಲಾವಣೆ ಮಾಡತಕ್ಕ ಪ್ರಮೇಯ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಹಾಸನದಲ್ಲಿ ತನಿಖೆಮಾಡಿ ಸಸ್‌ಪೆನ್‌ಷನ್‌ಮಾಡಿ ಇಟ್ಟರು.

ಶ್ರೀ ಎಚ್. ಎಂ. ಚನ್ನಬಸಪ್ಪ.—ತನಿಖೆಯಾಗಿ ತಪ್ಪು ಸಾಬೀತು ಆದಲ್ಲಿ ಅವರಿಗೆ ಶಿಕ್ಷೆಯಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಹೇಳಿದಾಗ ದೇವೇಗೌಡರು ತೀವ್ರತರವಾಗಿ ಅವಾದನೆ ಮಾಡುತ್ತಾರೆ ಎಂದು ಕೃಷ್ಣರವರು ಆಕ್ಷೇಪಣೆ ಎತ್ತಿದರು, ದುರ್ದೈವ ಏನಾಗಿದೆ ಎಂದರೆ ಈ ಘಟನೆಗಳು ಯಾರ ಮೇಲೂ ವೈಯಕ್ತಿಕವಾಗಿ ಆರೋಪಣೆ ಮಾಡಬೇಕು ಎಂದು ಅಲ್ಲ. ಈ ದುರ್ದೈವ ಘಟನೆಗಳು ಹೇಗೆ ನಡೆದುಕೊಂಡು ಬಂದಿವೆ. ಇಂತಹ ಘಟನೆಗಳು ಚಿಕ್ಕೇಗೌಡರ ಕ್ಷೇತ್ರದಲ್ಲಿ ನಡೆದಿದೆ, ಸುಬ್ಬಯ್ಯಶೆಟ್ಟರ ಕ್ಷೇತ್ರದಲ್ಲಿ ನಡೆದಿದೆ, ಘೋರ್ಪಡೆಯವರ ಕ್ಷೇತ್ರದಲ್ಲಿ

ಆಪಾದನೆ ಈ ಸಭೆಯಲ್ಲಿ ಮಾಡಿದರು. ಅದಾದಮೇಲೆ ಸರ್ಕಾರದವರು ಎಷ್ಟು ತ್ವರಿತವಾಗಿ ಸಂಬಂಧಪಟ್ಟ ಅಧಿಕಾರಿಯನ್ನು ಶಿಕ್ಷೆ ಮಾಡುವುದಕ್ಕೆ ಹೋಗುತ್ತಿದ್ದಾರೆ ಎಂಬುದನ್ನು ನೋಡಿದರೆ ಯಾವ ರೀತಿ ಅಧಿಕಾರಿಗಳನ್ನು ರಕ್ಷಿಸಬೇಕು, ಪೋಷಿಸಬೇಕು ಎನ್ನುತಕ್ಕದ್ದು ಇದೆ ಎಂಬುದು ಇದರಿಂದ ಅರ್ಥವಾಗುತ್ತದೆ. ನಾನು ನೋಟೀಸ್ ಕೊಟ್ಟಮೇಲೆ ಮೊನ್ನೆ ದಿವಸ 17-2-1975ರಲ್ಲಿ ಅಂತಿಮ ನೋಟೀಸ ಕೊಟ್ಟಿದ್ದಾರೆ, ಇಷ್ಟೇ ಸಾಕು. ಎಷ್ಟರಮಟ್ಟಿಗೆ ಅಧಿಕಾರಿಗಳು ದುರುಪಯೋಗ ಮಾಡಿಕೊಂಡಂಥ ಸಂದರ್ಭದಲ್ಲಿ ಅವರನ್ನು ಉಳಿಸಲಿಕ್ಕೆ ಹೋಗುತ್ತಾರೆ ಎನ್ನುವುದು ಅರ್ಥವಾಗುತ್ತದೆ. ಇದನ್ನು ದೇಶದ ಜನ ಅರ್ಥಮಾಡಿಕೊಳ್ಳಬೇಕಾಗುತ್ತದೆ.

Sri S. M. KRISHNA.—There is only one point to which the hon. the Leader of the Opposition referred earlier, *viz.*, that the District Judge or some subordinate Magistrate who went into the matter has been transferred. That is the kind of statement he made. May I draw the attention of the hon. the Leader of the Opposition that the transfers of those officers are made by the High Court and not by the Government ?

Sri H. D. DEVEGOWDA.—In consultation with the Government ! ಆರನೇ ತಾರೀಖು ರಿಪೋರ್ಟ್ ಕೊಟ್ಟರು, ವರದಿ ಬಂದ ತಕ್ಷಣ ಟೀಲ ಎತ್ತಿಬಿಟ್ಟರು.

ಶ್ರೀ ಎಸ್. ಬಂಗಾರಪ್ಪ.—ನವೆಂಬರ್ ತಿಂಗಳು 24 ಅಥವಾ 26ನೇ ತಾರೀಖು ನೋಟೀಸ್ ಕೊಟ್ಟಿದ್ದು.

ಅಧ್ಯಕ್ಷರು.—ಆ ವಿಷಯ ಮುಗಿಯಿತು.

ಶ್ರೀ ಎಸ್. ಬಂಗಾರಪ್ಪ.—15ದಿವಸ ಕಾರಾವಕಾಶಕೊಟ್ಟು ನೋಟೀಸ್ ಕೊಟ್ಟಿದ್ದು ನವೆಂಬರ 26ನೇ ತಾರೀಖು ಕೊಟ್ಟಿದ್ದಾರೆ. 15 ದಿವಸ ಕಾಲಾವಕಾಶ ಕೊಟ್ಟರೆ ಅದು 10-12-1974ಕ್ಕೆ ಮುಗಿಯಿತು. 12-12-1974ರೊಳಗೆ ಎಕ್ಸ್‌ಪ್ಲನೇಷನ್ ಕೊಡಬೇಕು. ನೀವು ಎರಡನೇ ಮೆಮೋ ಎಂದು ಕೊಟ್ಟಿದ್ದೀರಿ ? 17-2-1975ರಲ್ಲಿ ಕೊಟ್ಟಿದ್ದೀರಿ.
15 ದಿವಸ ಕಾರಾವಕಾಶ ಕೊಟ್ಟು ನೋಟೀಸ್ ಕೊಟ್ಟಿದ್ದೀರಿ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಮೂರು ಸಾರಿ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಫೆಬ್ರುವರಿವರೆಗೆ ಏಕೆ ಕಾದಿದ್ದಿರಿ ? 12-12-1974ಕ್ಕೆ ಅವಧಿ ಮುಗಿಯಿತು. ಅವಧಿಮುಗಿದ ಕೂಡಲೇ ಕ್ರಮ ಏಕೆ ತೆಗೆದುಕೊಳ್ಳಲಿಲ್ಲ ! ಕ್ರಮ ತೆಗೆದುಕೊಳ್ಳುವುದಕ್ಕೆ ಏಕೆ ಕಾದಿದ್ದಿರಿ ಎನ್ನುವುದನ್ನು ಮಾನ್ಯ ಚನ್ನಬಸಪ್ಪನವರು ತಿಳಿಸಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಧ್ಯಕ್ಷರು ಈ ವಿಷಯ ಮುಗಿಯಿತು ಎಂದು ಹೇಳಿದ್ದಾರೆ.

ಅಧ್ಯಕ್ಷರು.—ನಾನು ಈ ವಿಷಯ ಮುಗಿಯಿತು ಎಂದು ಹೇಳಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಿನ್ನೆ ನಮ್ಮನ್ನು ಹೊರಗೆ ಕಳುಹಿಸಿದ ಮೇಲೆ ಸಭೆ ಅಡ್ಜರ್ನ್ ಆಯಿತು ಎಂದು ಪತ್ರಿಕೆಯಿಂದ ಗೊತ್ತಾಯಿತು.

ಅಧ್ಯಕ್ಷರು.—ಅದು ಮುಗಿಯಿತು ಎಂದು ಹೇಳಿದವರು ನಾನೋ ನೀವೋ ?

ಶ್ರೀ ಎಸ್. ಬಂಗಾರಪ್ಪ.—Nearly three months ಸರ್ಕಾರದವರು ಏನು ಮಾಡುತ್ತಿದ್ದರು ?

ಅಧ್ಯಕ್ಷರು.—ದೇವೇಗೌಡರು ಎರ್ಡ್ಲಾ ಹೇಳಿದರು.

ಶ್ರೀ ಕೋಣಂದೂರು ಲಿಂಗಪ್ಪ.—ಬೇಕಾದರೆ ಅದಕ್ಕೆ ನಾಳೆ ಉತ್ತರ ಕೊಡಲಿ.

ಶ್ರೀ ಕಾಗೋಡು ತಿಮ್ಮಪ್ಪ.—ಇವತ್ತು ಇಲ್ಲದೇ ಇದ್ದರೆ ನಾಳೆ ಉತ್ತರ ಕೊಡಲಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅವರ ಗಾಡಿ ಚೈರ್‌ಮನ್ ಅಗಿದೆ, ಸ್ಪೀಡಾಗಿ ಓಡಿಸುತ್ತೇನೆ ಎಂದರೆ ಹೇಗೆ !

ಶ್ರೀ ಎಚ್. ಎಂ. ಚನ್ನಬಸಪ್ಪ.—ಶ್ರೀಮಾನ್ ಪುಟ್ಟಸ್ವಾಮಯ್ಯನವರು ಮಾತನಾಡದ ಹೊರತು ವಿಷಯ ಅಖೈರು ಆಗುವುದಿಲ್ಲ, ಈಗ ಮಾತನಾಡಿದ್ದಾರೆ, ಅದರಿಂದ ಮುಗಿಯಿತು.

I have taken note of the seriousness of the hon. members. I may add that all formalities have been practically moved and we will take speediest action.

ಶ್ರೀ ಕಾಗೋಡು ತಿಮ್ಮಪ್ಪ.—ಯಾವತ್ತು ಕ್ರಮ ತೆಗೆದುಕೊಳ್ಳುತ್ತೀರಿ ?

Sri H. M CHANNABASAPPA.—I have how understood the feelings of the hon. Members of the Opposition. ನೀವು ಇನ್ನೊಂದು ಸಲ ಹೇಳುವುದರೊಳಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ —ಈ ತರಹ ಜಾಣ್ಮೆಯ ಉತ್ತರದಿಂದ ನಮಗೆ ಸಮಾಧಾನ ವಾಗುವುದಿಲ್ಲ. ಇಂತಹ ದಿವಸ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ ಸಾಕು. ಇಂತಹ ವಾಕ್ಚಾತುರ್ಯ ನಮಗೆ ಬೇಡ ಈ ತರಹ ಮಾತಿನ ಪೆಜ್ಜನ್ನು ನಾವು ಕೇಳುವುದಕ್ಕೆ ಬಂದಿಲ್ಲ. ಈ ಸರ್ಕಾರ ಜೀವಂತ ಇದೆಯೇ ? ಈ ಸರ್ಕಾರಕ್ಕೆ ಮಾನ ಮರ್ಯಾದೆ ಇದೆಯೇ ? ಕೊರೆ ಪಾತಕ ಸರ್ಕಾರಕ್ಕೆ ಆತ್ಮಗೌರವ ಇದೆಯೇ ?

ಶ್ರೀ ಎಸ್. ಎಂ. ಕೃಷ್ಣ. ಯಾರಿಗೆ ಕೊರೆ ಪಾತಕರು ಎಂದು ಹೇಳುತ್ತಿದ್ದೀರಿ ?

ಶ್ರೀ ಕೋಣಂದೂರು ಲಿಂಗಪ್ಪ.—ನಿಮ್ಮ ಸರ್ಕಾರಕ್ಕೆ.

ಶ್ರೀ ಎಸ್ ಎಂ. ಶೀರನಾಳ ಚಂದ್ರಶೇಖರ್.—ನಾಲಗೆಗೆ ಮೂಳೆ ಇಲ್ಲ ಎಂದು ಹೇಳುತ್ತಾರೆ, ಲಿಂಗಪ್ಪನವರ ನಾಲಗೆಗೆ ಮೂಳೆ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನೀವು ಅಧಿಕಾರಿಗಳಿಂದಲಾದರೂ ತಿಳಿದುಕೊಂಡು ಉತ್ತರ ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಉತ್ತರ ಹೇಳುತ್ತೇನೆ.

MOTION OF THANKS TO THE GOVERNOR'S ADDRESS

—(Debate Continued)

† ಶ್ರೀ ಎಚ್. ಡಿ. ದೇವೇಗೌಡ.—ಅವರು ಉತ್ತರ ಹೇಳುವುದಕ್ಕೆ ಮುಂಚೆ ನಾನು ಒಂದು ಮಾತನ್ನು ಹೇಳುತ್ತೇನೆ. ನಿನ್ನೆ ಈ ಸಭೆಯಲ್ಲಿ ತಾವು ತಮ್ಮನ್ನು ಹೊರಗೆ ಹಾಕಿದ ಮೇಲೆ ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಡಬೇಕು ಎಂದು ಸರ್ಕಾರವನ್ನು ತಾವು ಕೇಳಿದಾಗ ಪತ್ರಿಕೆಯಲ್ಲಿ ಬಂದಿರುವ ವರದಿ ಪ್ರಕಾರ ಯಾರೂ ಉತ್ತರ ಕೊಡಲಿಕ್ಕೆ ಸಿದ್ಧವಿರಲಿಲ್ಲ ಎನ್ನುವ ಅಭಿಪ್ರಾಯ ಬರುತ್ತದೆ. ಆದುದರಿಂದ ಸಭೆಯನ್ನು ಅರ್ಧಗಂಟೆ ಮುಂದೆ ಹಾಕಿದ್ದೀರಿ.

ಅಧ್ಯಕ್ಷರು.—ನಾನು ಹೇಳುತ್ತೇನೆ ಕೇಳಿ, ನಾನು ಯಾರು ಉತ್ತರ ಹೇಳುತ್ತೀರಿ ಎಂದು ಕೇಳುವಷ್ಟರೊಳಗೆ ಫೈನಾನ್ಸ್ ಮಿನಿಸ್ಟರ್ ನಾನು ಬಿಲ್ ಇಂಟರ್‌ಡ್ಯೂಸ್ ಮಾಡುತ್ತೇನೆ. ಎಂದು ಹೇಳಿದರು ; ಅದಕ್ಕೆ ಮೊದಲು ಉತ್ತರ ಆಗಲಿ, ಆಮೇಲೆ ಬಿಲ್ ಇಂಟರ್‌ಡ್ಯೂಸ್ ಮಾಡಿ ಎಂದು ಹೇಳುವಷ್ಟರಲ್ಲಿ ಅರ್ಧಗಂಟೆ ಅಡ್ಜರ್ನ್ ಆಯಿತು.

ಶ್ರೀ ಎಸ್. ಎಂ. ಕೃಷ್ಣ.—ಅಡ್ಜರ್ನ್ ಆದ ಉದ್ದೇಶ ಏನೆಂದರೆ, ತಾವು ಸಭೆಯಿಂದ ಹೊರಗೆ ಹೋದ ಮೇಲೆ ತಮ್ಮನ್ನು ಪರ್ಸುಯೇಡ್ ಮಾಡಿ ವಾಪಸ್ ಕರೆದುಕೊಂಡು ಬರಬೇಕು ಎನ್ನುವುದ ಕ್ಕೋಸ್ಕರ ಅಡ್ಜರ್ನ್ ಆಯಿತು.

ಶ್ರೀ ಎಚ್. ಡಿ. ದೇವೇಗೌಡ.—ನಿನ್ನೆ ನಾವು ಹೊರಗಡೆ ಕುಳಿತುಕೊಂಡಾಗ ಯಾವ ಪರ್ಸುಯೇಷನ್ ಮಾಡಲಿಲ್ಲ.

ಶ್ರೀ ಎಸ್. ಎಂ. ಕೃಷ್ಣ.— ಪರ್ಸುಯೇಷನ್ ಮಾಡಿ ಏನೂ ಪ್ರಯೋಜನವಾಗುವುದಿಲ್ಲ ಎಂದು ಸ್ಪೀಕರ್‌ರವರು ಹೇಳಿದರು.

ಶ್ರೀ ಎಚ್. ಡಿ. ದೇವೇಗೌಡ.—ರಾಜ್ಯಪಾಲರು ಭಾಷಣಕ್ಕೆ ಸಾಮಾನ್ಯವಾಗಿ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕು. ನಿನ್ನೆ ಶ್ರೀಮಾನ್ ರಾಚಯ್ಯನವರು ಜತ್ತಿ ಸರ್ಕಾರ ಮತ್ತು